ಗಣಪತಿಭಟ್ಟರು, ಮೂಕಾಂಬಿಕಮ್ಮ, ಸುಮತಿಯ ಕೂಗನ್ನು ಕೇಳಿ ಎದ್ದು ಬಂದಿದ್ದರು. ಹುಚ್ಚು – ಹುಚ್ಚು ಸುರಿಯುತ್ತಿದ್ದ ಮುಖ. ಇಳಿಯುತ್ತಿದ್ದ ಬೆವರನ್ನು ಕಂಡು ಗಾಬರಿಗೊಂಡರು. ಸುಮತಿಯ ಕಣ್ಣು ತಪ್ಪಿಸುತ್ತಾ ಮಂಜುನಾಥ ಹಿಂದೆಯೇ ನಿಂತಿದ್ದ. ಏನು ಹೇಳಲೂ ತೋಚದೆ 'ಹಾವು, ಹಾವು' ಎಂದು ತೊದಲಿದಾಗ ಭಟ್ಟರು ಮಂಚದ ಕೆಳಗೆ, ಚೀಲಗಳ ಮಧ್ಯೆ ಎಲ್ಲಾ ನೋಡಿದರು. ಏನೂ ಇರಲಿಲ್ಲ.

'ಮೊದ್ಲೇ ಹೆದರಿದ್ದಿ. ಕನಸಿರಬೇಕು' ಎಂದು ಭಟ್ಟರು ನುಡಿದಾಗ ಮಂಜುನಾಥ ಅಪರಾಧಿಯಂತೆ ತಲೆಯನ್ನು ತಗ್ಗಿಸಿದ. ಮೂಕಾಂಬಿಕಮ್ಮ, ಮಂಜುನಾಥನಿಗೆ ಆ ಕೋಣೆಯಲ್ಲಿ ಮಲಗಲು ಹೇಳಿ ಸುಮತಿಯನ್ನು ತಮ್ಮ ಬಳಿ ಮಲಗಿಸಿಕೊಂಡರು.

ಬೆಳಿಗ್ಗೆ ಎಚ್ಚರವಾದಾಗ, ಭಟ್ಟರು ಮೂಕಾಂಬಿಕಮ್ಮ ಆಗಲೇ ಎದ್ದು ಹಾಸಿಗೆ ಸುತ್ತಿಟ್ಟು ಹೋಗಿದ್ದರು. ತಡವಾಗಿ ಎದ್ದುದಕ್ಕೆ ಸುಮತಿಗೆ ನಾಚಿಕೆಯಾಗಿತ್ತು. ಅದರೊಂದಿಗೆ ಹಿಂದಿನ ರಾತ್ರಿಯ ನೆನಪು ಬೇರೆ ಮೈಯೆಲ್ಲಾ ಜಡವಾಗಿತ್ತು. ಈಗ ಅದರ ಅರ್ಥ ಸ್ಪಷ್ಟವಾಗಿತ್ತು. ಹಲ್ಲುಜ್ಜಲು ಹೋದಾಗ ಹಿತ್ತಲಲ್ಲಿದ್ದ ಮೂಕಾಂಬಿಕಮ್ಮ 'ಏನಮ್ಮ ರಾತ್ರಿ ಸರಿಯಾಗಿ ನಿದ್ದೆ ಆಯ್ತೋ, ಇಲ್ವೋ?' ಎಂದಾಗ ಆಗತಾನೆ ಎದ್ದು ಬಂದಿದ್ದ ಮಂಜುನಾಥ ತಲೆತಗ್ಗಿಸಿ ಬಚ್ಚಲು ಮನೆಗೆ ಹೋಗಿದ್ದ. ಮಾಲತಿ, ಶಂಕರನಾರಾಯಣ ಹಾಗೂ ಅನಿಲ್ ಒಬ್ಬೊಬ್ಬರೇ ಎದ್ದು ಬಂದರು.

**ಅವನೇ ಇಲ್ಲಿಗೆ ಕರ್‍ಕೊಂಡು ಬಂದು ಇದೇ ರಂಜಕದ ಹೂವಿನ ಹಾಸಿಗೆ ಮೇಲೆ ಕೂಡಿಸಿ, ತಾನು ಎದುರಿಗೆ ಕುಳಿತು, 'ನಾನು ನಿನ್ನನ್ನು ತುಂಬಾ ಪ್ರೀತಿಸ್ತೇನೆ. ನನ್ನನ್ನ ಮದುವೆ ಆಗ್ತೀಯಾ?' ಎಂದು ಕೇಳಿದ್ದರೆ ಎಷ್ಟು ಚೆನ್ನಾಗಿರ್‍ತಿತ್ತು! ತಾನು ನಾಚಿಕೆಯಿಂದ ತಲೆತಗ್ಗಿಸಿ ಒಪ್ಪಿಗೆ ಸೂಚಿಸಿದಾಗ ಹಾಗೇ ಕೈಯಿಂದ ಗಲ್ಲ ಹಿಡಿದೆತ್ತಿ, ಕಣ್ಣಲ್ಲಿ ಕಣ್ಣಿಟ್ಟು, ಮುಖ ಹತ್ತಿರ ತಂದು ತುಟಿಯ ಮೇಲೆ ಹೂಮುತ್ತನ್ನೊತ್ತಿದ್ದರೆ ತಾನು ಆಗ ಎಷ್ಟು ಸುಖಿ!**

ಬೆಳಿಗ್ಗೆ ದೋಸೆ ಹುಯ್ದು ಕೊಡುವಾಗ ಮೂಕಾಂಬಿಕಮ್ಮ ರಾತ್ರಿ ಸುಮತಿ ಹೆದರಿ ಕಿರುಚಿದ್ದ ವಿಷಯವನ್ನು ಮಾಲತಿಗೆ ತಿಳಿಸಿದಾಗ ಅವಳು ಜೋರಾಗಿ ನಕ್ಕಳು. ಮಂಜುನಾಥ ಗಂಭೀರವಾಗಿ ಕುಳಿತು, ಎಲೆ ನೋಡಿಕೊಂಡು ದೋಸೆ ತಿನ್ನುತ್ತಿದ್ದ. ಹಿಂದಿನ ದಿನದ ತುಂಟತನದ ನಗು, ಪ್ರೀತಿಯ ನೋಟ ಒಂದೂ ಇರಲಿಲ್ಲ. ಎದುರಿಗೆ ಕುಳಿತ ಸುಮತಿಯನ್ನು ನೋಡುವ ಧೈರ್ಯವೂ ಅವನಿಗೆ ಆಗಿರಲಿಲ್ಲ. ಸುಮತಿಗೆ ಹಿಂದಿನ ದಿನದ ಉತ್ಸಾಹ ಆಗಲೇ ಬತ್ತಿ ಹೋಗಿತ್ತು. ಹಿಂದಿನ ದಿನ ಮನಸ್ಸು ಕಲ್ಪಿಸಿಕೊಂಡಿದ್ದ ಸುಂದರ ಸ್ವಪ್ನ ಭಗ್ನವಾಗಿತ್ತು. ಬೆಂಗಳೂರಿಗೆ ಆದಷ್ಟು ಬೇಗನೆ ಹಿಂತಿರುಗಲು ಮನಸ್ಸು ಚಡಪಡಿಸಿತು. ರಾತ್ರಿ ನಿದ್ರೆ ಸಾಲದೆ ಮಂಕಾಗಿದ್ದಾಳೆಂದು ಭಟ್ಟರು ತಿಳಿದರು.